ಜೋರು ಮಾಡಿಯೋ ಯಾವುದಾದರೂ ಒಡವೆಯನ್ನು ಕದ್ದುಕೊಂಡೇ ಹೋಗುತ್ತಿದ್ದನು. ಮನೆ ನಡೆಸುವುದೇ ಕಷ್ಟವಾದಾಗ ಸುನಂದಳ ಅಣ್ಣ ಸಹಾಯಕ್ಕೆ ಬಂದಿದ್ದ, ಉಳಿದಿದ್ದ ಒಂದೆರಡು ಎಕರೆ ಜಮೀನನ್ನು ಸಹ ಮಾರಿ ಹೆಂಡತಿ ಮಕ್ಕಳನ್ನು ಬೀದಿಯಲ್ಲಿ ನಿಲ್ಲಿಸಿಯಾನು ಎಂದು ಮುನ್ನೆಚ್ಚರಿಕೆಯಿಂದ ಜಮೀನಿನ ಪತ್ರಗಳನ್ನು, ಮನೆಯ ಪತ್ರಗಳನ್ನೂ ಜೋಪಾನ ಮಾಡಿ ಆಗಾಗ ಬಂದು ಜಮೀನಿನ ಕೆಲಸ ಮಾಡಿಸಿ ಸುನಂದ ಮತ್ತು ಆರು ಮಕ್ಕಳು ಬೀದಿಗೆ ಬೀಳದಂತೆ ಕಾಪಾಡಿದ್ದ. ಮೊದಲೆರಡು ಹೆಣ್ಣುಮಕ್ಕಳ ಮದುವೆಗೂ ಸುನಂದಾಗೆ ತವರಿನ ಸಹಾಯ ಸಿಕ್ಕಿ ಹೇಗೋ ದಾಟಿಸಿದ್ದಳು.

ಸುನಂದಳ ಮಗ ಶೇಖರ ಹತ್ತನೇ ಕ್ಲಾಸಿಗೆ ಸ್ಕೂಲು ಬಿಟ್ಟು ಜಮೀನಿನ ಕೆಲಸ ಮಾಡಲಾರಂಭಿಸಿದ. ಸುನಂದಳ ಅಣ್ಣ ಅವನಿಗೆ ಬೆಂಗಾವಲಾಗಿ ನಿಂತ. ತಾಯಿ ಪಟ್ಟ ಪಾಡನ್ನು ಕಂಡಿದ್ದ ಶೇಖರ ತನ್ನಪ್ಪನಂತೆ ಮಾತ್ರ ಆಗಬಾರದು ಎಂದುಕೊಂಡು ಶ್ರಮದಿಂದ ಕೆಲಸ ಮಾಡುತ್ತಿದ್ದ. ಇಪ್ಪತ್ತೈದನೇ ವಯಸ್ಸಿಗೆ ಹೇಗೋ ಸಾಲ ಸೋಲ ಮಾಡಿ ಮೂವರು ಅಕ್ಕಂದಿರ ಮದುವೆ ಮಾಡಿದ್ದ. ಆ ಮದುವೆಗಳಿಗೂ ಮಲ್ಲಿಕಾರ್ಜುನ ಹೆಂಡತಿಯ ಅಣ್ಣನ ಬೆದರಿಕೆಯಿಂದಲೇ ಬಂದು, ನೆಂಟರಂತೆ ಕುಳಿತು, ಉಂಡು ಹೋಗಿದ್ದ. ಶೇಖರ ಮದುವೆ, ಬಾಣಂತನ, ನಾಮಕರಣಗಳ ಸಾಲು ಸಾಲು ಸಾಲಗಳನ್ನು ತೀರಿಸುತ್ತಲೇ ಇನ್ನೊಂದೆರಡು ಎಕರೆ ಗದ್ದೆ ಕೊಂಡು ತನ್ನ ಅಮ್ಮ, ಮಾವ ಮತ್ತು ಅಕ್ಕಂದಿರ ಮೆಚ್ಚುಗೆ ಗಳಿಸಿ ಇದ್ದರೆ ಇಂತಹ ಮಗನಿರಬೇಕು ಎನಿಸಿಕೊಂಡ. ಊರವರೆಲ್ಲ ಅಂತಾ ದಗಲ್ಬಾಜಿ ಅಪ್ಪನಿಗೆ ಎಂತಾ ಅಪರಂಜಿಯಂತಾ ಮಗ, ಮನೆ ಉದ್ಧಾರ ಮಾಡಿದ ಎಂದು ಕೊಂಡಾಡುವಂತಾದ. ಆಗಾಗ ತಿಂಗಳುಗಟ್ಟಲೆ ಬಿಟ್ಟು ಬರುತ್ತಿದ್ದ ಮಲ್ಲಿಕಾರ್ಜುನ ಮಗನಿಂದಲೂ ಅಷ್ಟಿಷ್ಟು ದುಡ್ಡು ಕಿತ್ತುಕೊಂಡೇ ಊರು ಬಿಡುತ್ತಿದ್ದ. ಅವನು ಮನೆಗೆ ಬಂದರೆ ಅವನ ಮುಖ ನೋಡಲಾಗದೇ ತವರು ಮನೆಗೋ ಇನ್ನಾರಾದರೂ ನಂಟರ ಮನೆಗೋ ಸುನಂದಾ ಹೋಗಿಬಿಡುತ್ತಿದ್ದಳು. ಅವನ ಬಗ್ಗೆ ಚಿಂತಿಸುವುದನ್ನು ಬಿಟ್ಟೇಬಿಟ್ಟಿದ್ದಳು. ಅವನನ್ನು ಅಲ್ಲಿ ಇಲ್ಲಿ ಕಂಡವರಾರಾದರೂ ಹೇಳಲು ಬಂದರೆ ಕಿವಿಗೆ ಹಾಕಿಕೊಳ್ಳದೆ ಕುಳಿತುಬಿಡುತ್ತಿದ್ದಳು.

ತನ್ನಲ್ಲೇ ಏನಾದರೂ ಕೊರತೆಯಿತ್ತೆ, ಗಂಡನನ್ನು ಮನೆಯಲ್ಲಿ ಹಿಡಿದಿಟ್ಟುಕೊಳ್ಳಲು ತನಗೆ ಆಗಲಿಲ್ಲವೇನೋ ಎಂದೂ ಸುನಂದ ಎಷ್ಟೋ ಸಲ ಯೋಚಿಸಿದ್ದಿದೆ, ಮದುವೆಯಾದ ಮೊದಲೊಂದಷ್ಟು ವರ್ಷ ಮಲ್ಲಿಕಾರ್ಜುನಯ್ಯ ಪ್ರೀತಿಯಿಂದ ನೋಡಿಕೊಂಡಿದ್ದ. ಅವಳಿಗೂ ತನ್ನ ಗಂಡ ಎಷ್ಟು ಚೆಲುವ, ಮನೆಗೆ ಒಬ್ಬನೇ ಮಗ ಇರುವ ಆಸ್ತಿಯೆಲ್ಲಾ ಗಂಡನದೇ, ತನ್ನನ್ನು ಎಷ್ಟು ಚೆನ್ನಾಗಿ ನೋಡಿಕೊಳ್ಳುತ್ತಾನೆ ಎಂದೆಲ್ಲಾ ಗರ್ವ ಇತ್ತು. ವಾರಿಗೆಯವರೊಡನೆ ಅದನ್ನು ಆಡಿಯೂ ಇದ್ದಳು. ಆರು ಮಕ್ಕಳು ಹುಟ್ಟಿ, ಅತ್ತೆ ಮಾವ ಶಿವನ ಪಾದ ಸೇರುವವರೆಗೆ ಎಲ್ಲವೂ ಸರಿಯಾಗಿತ್ತು, ಅದ್ಯಾವ ಮಾಯದಲ್ಲಿ ಮಲ್ಲಿಕಾರ್ಜುನ ಮನೆಯ ಜಮೀನನ್ನು ಇಷ್ಟಿಷ್ಟೇ ಮಾರಿ ಹಾಕಿದನೋ ಸುನಂದನಿಗೆ ಹೇಳಲೇ ಇಲ್ಲ. ಊರವರೆಲ್ಲ ಮಾತನಾಡುವಾಗಲೇ ಅವಳಿಗೆ ತಿಳಿದದ್ದು. ಆಗ ಯಾಕೆ ಹೀಗೆ ಮಾಡಿದಿರಿ ಎಂದು ಪ್ರಶ್ನಿಸಿದವಳಿಗೂ ಅವನು ಉಡಾಫೆಯ ಉತ್ತರಗಳನ್ನೇ ಕೊಟ್ಟಿದ್ದ. ಏನೋ ವ್ಯವಹಾರ ಮಾಡುತ್ತೀನಿ ಬೇಗ ಶ್ರೀಮಂತರಾಗಬಹುದು ಮಕ್ಕಳನ್ನು ಚನ್ನಾಗಿ ಸಾಕಬಹುದು ಎಂದೆಲ್ಲಾ ಮರುಳು ಮಾಡಿ ಹೋಗಿದ್ದ. ನಿಧಾನವಾಗಿ ಅವನ ಬಣ್ಣ ಬಯಲಾಗುತ್ತಿತ್ತು, ಊರವರು, ನೆಂಟರು, ಅವನು ಎಲ್ಲೆಲ್ಲಿ ಸುತ್ತಿ ಏನೇನು ರಾಜಕಾರ್ಯ ಮಾಡುತ್ತಿದ್ದಾನೆ ಎಂದೆಲ್ಲಾ ಆಗಾಗ ಬಂದು ಹೇಳುವಾಗ ಸುನಂದ ತನ್ನ ಮಕ್ಕಳ ಭವಿಷ್ಯ ನೆನೆದು ಕಣ್ಣೀರು ಹಾಕುವುದೊಂದೇ ದಾರಿಯಾಗಿತ್ತು.

ಮಲ್ಲಿಕಾರ್ಜುನ ಶಾಶ್ವತವಾಗಿ ಕಾಣೆಯಾಗಿ ಹೋಗಿದ್ದರೇ ಚನ್ನಾಗಿತ್ತೇನೋ, ಆಗಾಗ ವರ್ಷಕ್ಕೊಂದೆರಡು ಮೂರು ಬಾರಿ ಬಂದು, ಊರೆಲ್ಲಾ ತಿರುಗಾಡಿ ತನ್ನ ಸಾಧನೆಗಳನ್ನು ಒಂದಕ್ಕೆ ಹತ್ತು ಸುಳ್ಳು ಸೇರಿಸಿ ಕೊಚ್ಚಿಕೊಂಡು, ಮನೆ ಊಟವನ್ನು ಕಂಠ ಪೂರ್ತಿ ತಿಂದು ಸುಧಾರಿಸಿಕೊಂಡು, ಒಡವೆಯೋ ದುಡ್ಡೋ ದೋಚಿಕೊಂಡೇ ಹೋಗುತ್ತಿದ್ದ. ಒಮ್ಮೆಯೂ ಮನೆಗೆ, ಮಕ್ಕಳ ಓದಿಗೆ ಅಂತಾ ದುಡ್ಡು ಕೊಟ್ಟು ಹೋಗುತ್ತಿರಲಿಲ್ಲ. ಮೊದಮೊದಲು ಅವನು ಅಪರೂಪಕ್ಕೆ ಬಂದಾಗ ಆದರಿಸುತ್ತಿದ್ದ ಸುನಂದಾ, ಆಮೇಲಾಮೇಲೆ ಸಿಡಿಗುಟ್ಟುತ್ತಿದ್ದಳು. ಹೆಣ್ಣು ಮಕ್ಕಳಂತೂ ಅಪ್ಪನ ಆರ್ಭಟಕ್ಕೆ ಹೆದರಿ ಮಾತನಾಡಿಸುತ್ತಲೂ ಇರಲಿಲ್ಲ. ಇದ್ದೊಬ್ಬ ಮಗ